# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದಪ್ರಶ್ನೆ ಸಂಖ್ಯೆ : 381 (450)

ಸದಸ್ಯರ ಹೆಸರು : ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 19-08-2026

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>(ಅ)</td><td>ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇದು ಯಾವ ವರ್ಷ ಪ್ರಾರಂಭವಾಗಿದೆ; (ಮಾಹಿತಿ ನೀಡುವುದು)</td><td>ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಇದನ್ನು 2016ರಲ್ಲಿ ಪ್ರಾರಂಭಿಸಲಾಗಿದ್ದು, 2017ನೇ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸಿದೆ.</td></tr>
<tr><td>(ಆ)</td><td>ಈ ಒಂದು ವಿಶ್ವವಿದ್ಯಾಲಯಕ್ಕೆ ಎಷ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳು ಮಂಜೂರಾಗಿದೆ; ಅವುಗಳಲ್ಲಿ, ಖಾಯಂ ಆಗಿ ಎಷ್ಟು ಹುದ್ದೆಗಳನ್ನು ತುಂಬಿಕೊಳ್ಳಲಾಗಿದೆ; (ಮಾಹಿತಿ ಒದಗಿಸುವುದು);</td><td>ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಬೋಧಕ/ಬೋಧಕೇತರ ಹುದ್ದೆಗಳ ಸಂಖ್ಯೆ ಹಾಗೂ ಆರ್ಥಿಕ ಇಲಾಖೆಯು ನೇರ ನೇಮಕಾತಿಗೆ ಸಹಮತಿಸಿರುವ ಹುದ್ದೆಗಳ ವಿವರಗಳು ಈ ಕೆಳಕಂಡಂತಿದೆ:-<br><br>
<table>
<tr><th>ಕ್ರ.ಸಂ.</th><th>ಹುದ್ದೆಗಳ ವಿವರ</th><th>ಒಟ್ಟು</th></tr>
<tr><td>1.</td><td>ಮಂಜೂರಾದ ಬೋಧಕ ಹುದ್ದೆಗಳು</td><td>84</td></tr>
<tr><td>2.</td><td>ಮಂಜೂರಾದ ಭೋಧಕೇತರ ಹುದ್ದೆಗಳು</td><td>91</td></tr>
<tr><td colspan="2">ಒಟ್ಟು ಹುದ್ದೆಗಳು</td><td>175</td></tr>
</table>
<br>ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ಖಾಯಂ ಆಧಾರದ ಮೇಲೆ ನೇಮಕ ಮಾಡಿದ ಹುದ್ದೆಗಳ ವಿವರ ಈ ಕೆಳಕಂಡಂತಿದೆ:-<br>
<table>
<tr><th>ಕ್ರ.ಸಂ.</th><th>ಹುದ್ದೆ/ಪದನಾಮ</th><th>ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಕುಲಪತಿ</td><td>01</td></tr>
<tr><td>2</td><td>ಕುಲಸಚಿವರು</td><td>01</td></tr>
<tr><td colspan="2">ಒಟ್ಟು</td><td>02</td></tr>
</table>
</td></tr>
</table>

| | | |
|---|---|---|
| (ಇ) | ಆರ್ಥಿಕ ಇಲಾಖೆಯು **ಈ** ಒಂದು ವಿಶ್ವವಿದ್ಯಾಲಯಕ್ಕೆ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡಿದೆಯೇ; ಹಾಗಿದ್ದಲ್ಲಿ ಎಷ್ಟು ಹುದ್ದೆಗಳನ್ನು ತುಂಬಿಕೊಳ್ಳಲು ಯಾವ ದಿನಾಂಕದಂದು ಅನುಮತಿ ನೀಡಿದೆ;(ವಿವರವಾದ ಮಾಹಿತಿ ನೀಡುವುದು) | ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ಖಾಯಂ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 496 ವೆಚ್ಚ-6 2021, ದಿನಾಂಕ:20.03.2023ರಲ್ಲಿ 15 - ಬೋಧಕ ಹುದ್ದೆಗಳು ಹಾಗೂ 17 - ಬೋಧಕೇತರ ಹುದ್ದೆಗಳಿಗೆ ಸಹಮತಿ ನೀಡಿದೆ. |
| (ಈ) | ಖಾಯಂ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಇಲಾಖೆಯು ಈ ಹಿಂದೆ ಸದರಿ ವಿಶ್ವವಿದ್ಯಾಲಯದಲ್ಲಿ ಹಲವಾರು ವರ್ಷಗಳಿಂದ ತಾತ್ಕಾಲಿಕವಾಗಿ ಸೇವೆ ಸಲ್ಲಿಸಿದವರಿಗೆ weightage of marks ನೀಡುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ?(ವಿವರ ಒದಗಿಸುವುದು) | ಬೋಧಕ ಹುದ್ದೆಗಳಿಗೆ ಯುಜಿಸಿ ನಿಗದಿಗೊಳಿಸಿರುವ ನೀತಿ ನಿಯಮಗಳನುಸಾರ ನೇಮಕಾತಿ ಮಾಡಿಕೊಳ್ಳಬೇಕಾಗಿರುವುದರಿಂದ ಹಾಲಿ ತಾತ್ಕಾಲಿಕ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರಿಗೆ ಪೂರಕ ಅರ್ಹತೆಯನ್ನಾಗಿ (Weightage) ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ನೇಮಕಾತಿಗಾಗಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವವರ ಸಿಬ್ಬಂದಿಗೆ ಪೂರಕ ಅರ್ಹತೆಯನ್ನಾಗಿ (Weightage ) ಪರಿಗಣಿಸಲು ಅವಕಾಶವಿರುತ್ತದೆ. |

**ಸಂಖ್ಯೆ:ಗ್ರಾಅಪಂರಾ 230 ಜಿಪಸ 2026**

(ಈಶ್ವರ್ ಖಂಡ್ರೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು